ಮಾಯಾ ಅಥವಾ ಅಜ್ಟೆಕ್ ನಂತಹ ಪ್ರಾಚೀನ ನಾಗರಿಕತೆಯ ಸ್ಥಳೀಯ ವಿವೇಕ, ಪ್ರೇರಣೆ ಮತ್ತು ಗೌರವಾದರದ ಮೂಲವಾಗಿ ಮೆಕ್ಸಿಕನ್ ಕಲೆ, ಸಾಹಿತ್ಯ ಮತ್ತು ಸಮಕಾಲೀನ ಸಂಸ್ಕೃತಿಯಲ್ಲಿ ಸದಾ ಹರಿಯುತ್ತದೆ. ಪುರಾಣಗಳು ಮತ್ತು ದಂತಕತೆಗಳ ಮರುವ್ಯಾಖ್ಯೆಯಿಂದ ಮೊದಲುಗೊಂಡು ಕಲಾತ್ಮಕ ಅಭಿವ್ಯಕ್ತಿಯ ವಿವಿಧ ರೂಪಗಳಲ್ಲಿ ಶೈಲಿ ಮತ್ತು ಸಾಂಕೇತಿಕತೆಯ ಅಂಶಗಳ ಒಳಗೊಳ್ಳುವಿಕೆ ನಡೆಯುತ್ತದೆ. ಸ್ಥಳೀಯ ಪರಂಪರೆ ಎಂಬುದು ಇನ್ನೂ ಸಹ ಮೆಕ್ಸಿಕೋದ ಸೃಜನಾತ್ಮಕತೆಯ ಎದೆ ಬಡಿತವಾಗಿದೆ. ಇದು ನಮ್ಮದೇ ಸಾಂಸ್ಕೃತಿಕ ಬೇರುಗಳ ಸಮೃದ್ಧತೆ ಮತ್ತು ವೈವಿಧ್ಯತೆಯನ್ನು ನಮಗೆ ಆಗಾಗ ನೆನಪಿಸುತ್ತದೆ.

**◆ ಕವಿ ಆಕ್ಟೊವಿಯಾ ಪಾಜ್ ನಂತರದ ಹೊಸ ತಲೆಮಾರಿನ ಸಂಘರ್ಷ ಹಾಗೂ ಬಿಕ್ಕಟ್ಟು, ಕನಸು ಮತ್ತು ಆಶೋತ್ತರಗಳು ಮೆಕ್ಸಿಕನ್ ಕಾವ್ಯದಲ್ಲಿ ಯಾವ ರೀತಿ ಮೂಡಿ ಬರ್ತಾ ಇವೆ?**

ಆಕ್ಟೋವಿಯಾ ಪಾಜ್‌ನ ನಂತರವೂ ಮೆಕ್ಸಿಕನ್ ಕಾವ್ಯವು ಹೊಸ ಪೀಳಿಗೆಯ ಕನಸು ಕನವರಿಕೆಗಳನ್ನು ಮತ್ತು ಇಕ್ಕಟ್ಟು ಬಿಕ್ಕಟ್ಟುಗಳನ್ನು, ಸ್ಫುಟವಾಗಿ ಪ್ರತಿಬಿಂಬಿಸುವುದನ್ನ ಮುಂದುವರೆಸಿದೆ. ಭಾವನಾತ್ಮಕ ಪ್ರತಿಭಟನೆಯಿಂದ ಹಿಡಿದು ವೈಚಾರಿಕ ಪ್ರತಿಭಟನೆಯವರೆಗೆ ತುಂಬಿದ ಕಾವ್ಯದ ಸಾಲುಗಳ ಮೂಲಕ ಸಮಕಾಲೀನ ಕವಿಗಳು ಆಧುನಿಕ ಬದುಕಿನ ಸಂಕೀರ್ಣತೆಗಳನ್ನು ಅನ್ವೇಷಿಸುತ್ತಿದ್ದಾರೆ. ನಿರಂತರವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಧ್ವನಿ ಎತ್ತುವ ಸ್ವಂತಿಕೆಯ ಗುರುತಿನ ಹುಡುಕಾಟದಲ್ಲಿದ್ದಾರೆ.

**◆ ರುಲ್ಫೋನ 'ಪೆದ್ರೊ ಪರಾಮೊ' ಕಾದಂಬರಿ ನಮ್ಮ ಕನ್ನಡ ಭಾಷೆಗೂ ಅನುವಾದವಾಗಿದೆ. ಮೆಕ್ಸಿಕನ್ನರಿಗೆ ಯಾಕೆ ಅದು ಅಷ್ಟೊಂದು ಮುಖ್ಯ ಕೃತಿ ಆಯ್ತು ಅನ್ಸುತ್ತೆ?**

ರುಲ್ಫೋನ 'ಪೆದ್ರೊ ಪರಾಮೋ' ಕಾದಂಬರಿ ಮೆಕ್ಸಿಕನ್ ಚರಿತ್ರೆ ಹಾಗೂ ಕಾಲಜ್ಞಾನವನ್ನು ಸಾರುವ ಒಂದು ಬೇಸಿಕ್ ಕೃತಿಯಾಗಿದೆ. ನಿಸ್ಸಂಶಯವಾಗಿ ಅದು ಭೌಗೋಳಿಕ ಎಲ್ಲೆ ಮತ್ತು ಭಾಷಾ ಸಂಕೋಲೆಗಳನ್ನು ಮೀರುವಂತಹ ಸೃಜನಶೀಲ ಕೃತಿ. ಸ್ಥಳೀಯವಾಗಿದ್ದೂ, ವಿಶ್ವಾತ್ಮಕ ಮಾನವತಾವಾದವನ್ನು ಪ್ರತಿಧ್ವನಿಸುತ್ತದೆ. ಅದರ ಮಹತ್ವವಿರುವುದು, ಅದು ಮೆಕ್ಸಿಕನ್ನರ ಹುಸಿತನ, ಹುಂಬತನ, ಮುಗ್ಧತೆ ಮತ್ತು ಸ್ವಪ್ರತಿಷ್ಠೆಯ ಅನುಭವವನ್ನು ಒಟ್ಟಾರೆಯಾಗಿ ಭಟ್ಟಿ ಇಳಿಸಿ ಕೊಟ್ಟಿರುವುದರಲ್ಲಿದೆ. ನಿಜವಾದ ಅರ್ಥದಲ್ಲಿ ಅದು ಮ್ಯಾಜಿಕಲ್ ರಿಯಲಿಸಂ, ದುರಂತ ಮತ್ತು ರುದ್ರ ಸೌಂದರ್ಯದ ವಿಶಿಷ್ಟ ಸಂಯೋಜನೆಯಾಗಿದೆ. ಅನಂತರ ಅದರ ಲಘು ಅನುಕರಣೆಗಳು ಭಾಳ ಬಂದವು ಆ ಮಾತು ಬೇರೆ, ಆದರೆ ಪೆದ್ರೊ ಪರಾಮೋ ಕಥೆಯಲ್ಲಿ ಪ್ರೇಮ, ಕಾಮ, ದೇಹ, ಆತ್ಮ, ಕೊಲೆ, ಸಾವು, ನೋವು, ಹುಚ್ಚುತನ, ತ್ಯಾಗ ಮುಂತಾದ ಬಾಳಿನ ಬಿಡುಗಡೆಯ ಚಿರಂತನ ಸತ್ಯಗಳ ಅನುರಣಿಸುವಿಕೆಯನ್ನು ನಾದಲೀಲೆ ಎಂಬಂತೆ ಹಿಡಿಯುತ್ತಾನೆ ರುಲ್ಫೋ. ಆ ಮೂಲಕ ನಮ್ಮನ್ನು ಒಂದು ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಪಯಣಕ್ಕೆ ಕರೆದೊಯ್ಯುತ್ತಾನೆ

**◆ ಕವಿತೆ ಅಂದ್ರೆ ನಿಮ್ ಪ್ರಕಾರ ಏನು?**

ಕವಿತೆ ನನಗೆ ಅಡಗುದಾಣ. ಕವಿತೆ ನನ್ನ ನೆಮ್ಮದಿ ಹಾಗೂ ನೆಮ್ಮದಿ ಕೆಡಿಸಿಕೊಳ್ಳುವ ಆಳವಾದ ಪ್ಯಾಷನ್. ಅದೊಂದು ಕೆಟ್ಟ ಚಾಳಿ. ಅದೊಂದು ಮಾಧ್ಯಮ. ಕವಿತೆಯ ಮೂಲಕ ನನಗೆ, ನನ್ನ ಆಳದ ನಿಕಟ ಭಾವಾಲೋಚನೆಗಳಿಗೆ ಧ್ವನಿ ಕೊಡಲು, ಮನುಷ್ಯನ ಮನಸ್ಸಿನ ಆಳವನ್ನು ಅನ್ವೇಷಿಸಲು ಮತ್ತವನ ಕಲ್ಪನೆಯ ಎಳೆಗಳನ್ನ ಸುಂದರ ಮತ್ತು ಪ್ರಚೋದಿತ ಆಕೃತಿಯಾಗಿ ಹೊಸೆಯಲು ಸಾಧ್ಯವಾಗುತ್ತದೆ

**◆ ನಿಮಗೆ ಸದಾ ಕಾಡುವ ಒಂದು ಕವಿತೆಯ ಸಾಲು ಯಾವುದು?**

The sound of water is worth more than all the poets' words.

- Octavio Paz

ಅವೇ ಅವೇ ಶಬ್ದಗಳು. ಆದರೆ ಕಾಲಕಾಲಕ್ಕೆ ಅವು ಎತ್ತುವ ಅವತಾರ ನೋಡಿ ನಾನು ದಂಗಾಗಿದ್ದೇನೆ.

●